CCE-II-RR/PR/NSR/NSPR(B)/999/8044

**B**

ಆಗಸ್ಟ್ 2024 ರ ಪರೀಕ್ಷೆ-3
**AUGUST 2024 EXAMINATION-3**

ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 12 ]
Total No. of Printed Pages : 12 ]

ಒಟ್ಟು ಪ್ರಶ್ನೆಗಳ ಸಂಖ್ಯೆ : 47 ]
Total No. of Questions : 47 ]

**CCE RR/PR/ NSR/NSPR**
**Reduced Syllabus**

Question Paper Serial No.

**ಸಂಕೇತ ಸಂಖ್ಯೆ : 97-K**
**Code No. : 97-K**

# ವಿಷಯ : ರಾಜ್ಯಶಾಸ್ತ್ರ

# Subject : POLITICAL SCIENCE

**(ಕನ್ನಡ ಮಾಧ್ಯಮ / Kannada Medium)**

**(ಶಾಲಾ ಪುನರಾವರ್ತಿತ ಅಭ್ಯರ್ಥಿ / ಖಾಸಗಿ ಪುನರಾವರ್ತಿತ ಅಭ್ಯರ್ಥಿ / ಎನ್.ಎಸ್.ಆರ್. / ಎನ್.ಎಸ್.ಪಿ.ಆರ್.)**

**(Regular Repeater / Private Repeater / NSR / NSPR)**

ದಿನಾಂಕ : 05. 08. 2024 ] [ Date : 05. 08. 2024

ಸಮಯ : ಬೆಳಗ್ಗೆ 10-15 ರಿಂದ ಮಧ್ಯಾಹ್ನ 1-30 ರವರೆಗೆ ] [ Time : 10-15 A.M. to 1-30 P.M.

ಗರಿಷ್ಠ ಅಂಕಗಳು : 80 ] [ Max. Marks : 80

***ಪರೀಕ್ಷಾರ್ಥಿಗಾಗಿ ಸಾಮಾನ್ಯ ಸೂಚನೆಗಳು :***

**Cut here/ಇಲ್ಲಿ ಕತ್ತರಿಸಿ**

1. ಈ ಪ್ರಶ್ನೆಪತ್ರಿಕೆಯು ಒಟ್ಟು 47 ಪ್ರಶ್ನೆಗಳನ್ನು ಹೊಂದಿದೆ.
2. ಈ ಪ್ರಶ್ನೆಪತ್ರಿಕೆಯನ್ನು ಹಿಮ್ಮುಖ ಜಾಕೆಟ್ ಮೂಲಕ ಮೊಹರು (ಸೀಲ್) ಮಾಡಲಾಗಿದೆ. ಪರೀಕ್ಷೆ ಪ್ರಾರಂಭವಾಗುವ ಸಮಯಕ್ಕೆ ***ನಿಮ್ಮ ಪ್ರಶ್ನೆಪತ್ರಿಕೆಯ ಬಲಬದಿ ಪಾರ್ಶ್ವವನ್ನು ಕತ್ತರಿಸಿ (ಬಾಣವನ್ನು ಅನುಸರಿಸಿ), ಎಡಬದಿ ಪಾರ್ಶ್ವವನ್ನು ಕತ್ತರಿಸಬೇಡಿ.*** ಪ್ರಶ್ನೆಪತ್ರಿಕೆಯಲ್ಲಿ ಎಲ್ಲಾ ಪುಟಗಳು ಇವೆಯೇ ಎಂದು ಪರೀಕ್ಷಿಸಿಕೊಳ್ಳಿ.
3. ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.
4. ಬಲ ಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ತೋರಿಸುತ್ತವೆ.
5. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವು ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ನೀಡಲಾಗಿದೆ.
6. ನಿಮಗೆ ವಿತರಿಸಲಾಗಿರುವ ಪ್ರಶ್ನೆಪತ್ರಿಕೆಯ ಆವೃತ್ತಿ ( Version ) ಮತ್ತು ನಿಮ್ಮ ಪ್ರವೇಶ ಪತ್ರದಲ್ಲಿ ಮುದ್ರಿತವಾಗಿರುವ ಪ್ರಶ್ನೆಪತ್ರಿಕೆಯ ಆವೃತ್ತಿ ಒಂದೇ ಆಗಿರುವುದನ್ನು ಖಾತರಿಪಡಿಸಿಕೊಳ್ಳಿ.

ಇಲ್ಲಿಂದ ಕತ್ತರಿಸಿ

**TEAR HERE TO OPEN THE QUESTION PAPER**
ಪ್ರಶ್ನೆಪತ್ರಿಕೆಯನ್ನು ತೆರೆಯಲು ಇಲ್ಲಿ ಕತ್ತರಿಸಿ

**05. 08. 2024**

**Tear here**

**I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಒಂದು ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಂದಿಗೆ ಬರೆಯಿರಿ :**

**10 × 1 = 10**

1. ಭಾರತದ ಸಂವಿಧಾನ ಜಾರಿಗೆ ಬಂದದ್ದು

(A) 1950 ಜನವರಿ 26

(B) 1949 ನವೆಂಬರ್ 26

(C) 1947 ಆಗಸ್ಟ್ 15

(D) 1946 ಡಿಸೆಂಬರ್ 11

2. 'ಸಂವಿಧಾನದ ಒಡವೆ' ಎಂದು ಕರೆಯಲ್ಪಟ್ಟಿರುವ ನಮ್ಮ ಸಂವಿಧಾನದ ಭಾಗ

(A) ಮೂಲಭೂತ ಹಕ್ಕುಗಳು

(B) ಪ್ರಸ್ತಾವನೆ

(C) ಮೂಲಭೂತ ಕರ್ತವ್ಯಗಳು

(D) ಚುನಾವಣೆಗಳು

3. ಪ್ರಸ್ತಾವನೆಯಲ್ಲಿ ಸಮಾಜವಾದ ಪದವನ್ನು ಎಷ್ಟನೆ ತಿದ್ದುಪಡಿ ಪ್ರಕಾರ ಸೇರಿಸಿದೆ

(A) 40ನೇ ತಿದ್ದುಪಡಿ

(B) 41ನೇ ತಿದ್ದುಪಡಿ

(C) 42ನೇ ತಿದ್ದುಪಡಿ

(D) 44ನೇ ತಿದ್ದುಪಡಿ

4. ಡಾ. ಬಿ.ಆರ್. ಅಂಬೇಡ್ಕರ್‌ರವರ ಪ್ರಕಾರ ನಮ್ಮ ಸಂವಿಧಾನದ ಈ ವಿಧಿಯು ಆತ್ಮ ಮತ್ತು ಹೃದಯವಿದ್ದಂತೆ

(A) ವಿಧಿ – 01

(B) ವಿಧಿ – 21

(C) ವಿಧಿ – 32

(D) ವಿಧಿ – 51

5. ಅಕ್ರಮವಾಗಿ ಸರ್ಕಾರದ ಉನ್ನತ ಸ್ಥಾನಗಳನ್ನು ಅಕ್ರಮಿಸಿದರೆ ಅವರ ವಿರುದ್ಧ ನ್ಯಾಯಾಲಯ ಹೊರಡಿಸುವ ರಿಟ್ (ಆಜ್ಞೆ)

(A) ಪರಮಾದೇಶ

(B) ಪ್ರತಿಬಂಧಕಾಜ್ಞೆ

(C) ಸರ್ಷಿಯೋರರಿ

(D) ಕೋವಾರಂಟೊ

6. ಭಾರತದ ರಾಜ್ಯನೀತಿ ನಿರ್ದೇಶಕ ತತ್ವಗಳು ಕಂಡುಬರುವ ಸಂವಿಧಾನದ ಭಾಗ

(A) 2 ನೇ ಭಾಗ

(B) 4 ನೇ ಭಾಗ

(C) 5 ನೇ ಭಾಗ

(D) 8 ನೇ ಭಾಗ

7. ಒಂದು ರಾಜ್ಯದೊಳಗಿನ ಅತ್ಯುನ್ನತ ನ್ಯಾಯಾಲಯ

(A) ಲೋಕ ಅದಾಲತ್

(B) ಸೆಷನ್ಸ್ ನ್ಯಾಯಾಲಯ

(C) ಉಚ್ಚ ನ್ಯಾಯಾಲಯ

(D) ಸಿವಿಲ್ ನ್ಯಾಯಾಲಯ

8. ಗ್ರಾಹಕರ ಸಮಸ್ಯೆಗಳಿಗೆ ಪರಿಹಾರ ಒದಗಿಸುವ ನ್ಯಾಯಾಲಯಗಳು

(A) ಜಿಲ್ಲಾ ನ್ಯಾಯಾಲಯಗಳು

(B) ಕಂದಾಯ ನ್ಯಾಯಾಲಯಗಳು

(C) ಗ್ರಾಹಕ ನ್ಯಾಯಾಲಯಗಳು

(D) ಜನತಾ ನ್ಯಾಯಾಲಯಗಳು

9. ಪಂಚಾಯತ್‌ರಾಜ್ ವ್ಯವಸ್ಥೆಯ ಬೆನ್ನೆಲುಬು

(A) ಗ್ರಾಮಪಂಚಾಯಿತಿ

(B) ತಾಲ್ಲೂಕ್ ಪಂಚಾಯಿತಿ

(C) ಗ್ರಾಮಸಭೆ

(D) ಜಿಲ್ಲಾ ಪಂಚಾಯಿತಿ

10. ಕರ್ನಾಟಕ ಲೋಕಸೇವಾ ಆಯೋಗದ ಕೇಂದ್ರ ಕಚೇರಿ ಇರುವ ಸ್ಥಳ

(A) ಬೆಳಗಾವಿ

(B) ಕಲಬುರ್ಗಿ

(C) ಮೈಸೂರು

(D) ಬೆಂಗಳೂರು

**II.** 11. ***A*-ಪಟ್ಟಿಯ ಅಂಶಗಳನ್ನು *B*-ಪಟ್ಟಿಯ ಅಂಶಗಳೊಂದಿಗೆ ಹೊಂದಿಸಿ, ಉತ್ತರವನ್ನು ಕ್ರಮಾಕ್ಷರದೊಂದಿಗೆ ಬರೆಯಿರಿ :** **5 × 1 = 5**

| ***A*-ಪಟ್ಟಿ** | | ***B*-ಪಟ್ಟಿ** | |
|---|---|---|---|
| (A) | ಸಂಸದೀಯ ಪ್ರಜಾಪ್ರಭುತ್ವ ವ್ಯವಸ್ಥೆ | (i) | ಅಮೆರಿಕಾದ ಸಂವಿಧಾನ |
| (B) | ಮೂಲಭೂತ ಹಕ್ಕುಗಳು | (ii) | ರಷ್ಯಾದ ಸಂವಿಧಾನ |
| (C) | ಮೂಲಭೂತ ಕರ್ತವ್ಯಗಳು | (iii) | ಇಂಗ್ಲೆಂಡ್‌ನ ಸಂವಿಧಾನ |
| (D) | ರಾಜ್ಯನೀತಿ ನಿರ್ದೇಶಕ ತತ್ವಗಳು | (iv) | ಕೆನಡಾದ ಸಂವಿಧಾನ |
| (E) | ಪ್ರಬಲ ಒಕ್ಕೂಟ ವ್ಯವಸ್ಥೆ | (v) | ಐರ್ಲೆಂಡ್‌ನ ಸಂವಿಧಾನ |
| | | (vi) | ದಕ್ಷಿಣ ಆಫ್ರಿಕಾದ ಸಂವಿಧಾನ |
| | | (vii) | ಆಸ್ಟ್ರೇಲಿಯಾದ ಸಂವಿಧಾನ |

**III. ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ :** **15 × 1 = 15**

12. ಭಾರತದ ಸಂವಿಧಾನದ ಶಿಲ್ಪಿ ಎಂದು ಯಾರನ್ನು ಕರೆಯುತ್ತಾರೆ ?

13. ಭಾರತದ ಸಂವಿಧಾನದ ರಚನಾಸಭೆಯಲ್ಲಿ ಧ್ಯೇಯಗಳ ನಿರ್ಣಯವನ್ನು ಮಂಡಿಸಿದವರು ಯಾರು ?

14. ಭಾರತದ ಸ್ಥಳೀಯ ಸರ್ಕಾರ ವ್ಯವಸ್ಥೆಯ ಪಿತಾಮಹ ಯಾರು ?

15. ಪ್ರಜಾಪ್ರಭುತ್ವವನ್ನು ಅರ್ಥೈಸಿ.

16. 'ಆಸ್ತಿ ಹಕ್ಕ'ನ್ನು ನಮ್ಮ ಸಂವಿಧಾನದ ಮೂಲಭೂತ ಹಕ್ಕುಗಳ ಪಟ್ಟಿಯಿಂದ ತೆಗೆದುಹಾಕಿದ್ದು ಯಾವಾಗ ?

17. ಭಾರತದ ಸಂವಿಧಾನದಲ್ಲಿ ಪ್ರಸ್ತುತ ಮೂಲಭೂತ ಕರ್ತವ್ಯಗಳು ಎಷ್ಟಿವೆ ?

18. ಮಾಹಿತಿ ಹಕ್ಕು ಕಾಯ್ದೆ ಜನರಿಗೆ ತುಂಬಾ ಸಹಕಾರಿಯಾಗಿದೆ. ಹೇಗೆ ?

19. 'ಸಮಾನ ಕೆಲಸಕ್ಕೆ ಸಮಾನ ವೇತನ' ಇದು ಯಾವ ತತ್ವಕ್ಕೆ ಉದಾಹರಣೆಯಾಗಿದೆ ?

20. ಗಾಂಧಿವಾದ ತತ್ವಗಳೆಂದರೇನು ?

21. ಭಾರತದ ನ್ಯಾಯಾಂಗ ವ್ಯವಸ್ಥೆಯನ್ನು ಸ್ವತಂತ್ರ ನ್ಯಾಯಾಂಗ ವ್ಯವಸ್ಥೆ ಎಂದು ಕರೆಯುತ್ತಾರೆ. ಏಕೆ ?

22. ಕಂದಾಯ ನ್ಯಾಯಾಲಯದ ಮುಖ್ಯ ಕಾರ್ಯವೇನು ?

23. ಜನತಾ ನ್ಯಾಯಾಲಯಗಳನ್ನು ಸ್ಥಾಪಿಸಿರುವುದು.ಏಕೆ ?

24. ಮಹಾನಗರ ಪಾಲಿಕೆಯ ಸದಸ್ಯರನ್ನು ಏನೆಂದು ಕರೆಯುತ್ತಾರೆ ?

25. ಕೇಂದ್ರ ಲೋಕಸೇವಾ ಆಯೋಗದ ಅಧ್ಯಕ್ಷರನ್ನು ನೇಮಕ ಮಾಡುವವರು ಯಾರು ?

26. ಲೋಕಸೇವಾ ಆಯೋಗದ ರಚನೆಗೆ ಅವಕಾಶ ನೀಡಿರುವ ಸಂವಿಧಾನದ ವಿಧಿ ಯಾವುದು ?

**IV. ಈ ಕೆಳಗಿನ ಪ್ರಶ್ನೆಗಳಿಗೆ ಎರಡರಿಂದ ನಾಲ್ಕು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ :**

**$14 \times 2 = 28$**

27. ನಮ್ಯ ಸಂವಿಧಾನ ಮತ್ತು ಅನಮ್ಯ ಸಂವಿಧಾನಕ್ಕಿರುವ ವ್ಯತ್ಯಾಸಗಳನ್ನು ತಿಳಿಸಿ.

28. ಭಾರತದ ಸಂವಿಧಾನದ ಬೆಳವಣಿಗೆಗೆ ನೆರವಾದ ಕಾಯ್ದೆಗಳನ್ನು ತಿಳಿಸಿ.

29. ನ್ಯಾಯದ ವಿಧಗಳನ್ನು ಹೆಸರಿಸಿ.

30. ನಮ್ಮ ಸಂವಿಧಾನದ ಪ್ರಸ್ತಾವನೆಯ ಮಹತ್ವವನ್ನು ಸಂಕ್ಷಿಪ್ತವಾಗಿ ತಿಳಿಸಿ.

31. ಮೂಲಭೂತ ಹಕ್ಕುಗಳ ಗುಣಲಕ್ಷಣಗಳನ್ನು ತಿಳಿಸಿ.

32. ಯಾವುದಾದರೂ ನಾಲ್ಕು ಮೂಲಭೂತ ಹಕ್ಕುಗಳನ್ನು ಹೆಸರಿಸಿ.

33. ಶಿಕ್ಷಣ ಹಕ್ಕು ಕಾಯಿದೆಯನ್ನು ರಚಿಸಿದ್ದು ಏಕೆ ?

34. ರಾಜ್ಯನೀತಿ ನಿರ್ದೇಶಕ ತತ್ವಗಳ ವಿಧಗಳು ಯಾವುವು ?

35. ರಾಜ್ಯನೀತಿ ನಿರ್ದೇಶಕ ತತ್ವಗಳ ಆಧಾರದಲ್ಲಿ ಜಾರಿಗೆ ತಂದಿರುವ ಕಾರ್ಯಕ್ರಮಗಳು ಯಾವುವು ?

36. ಉದಾರವಾದಿ ತತ್ವಗಳಿಗೆ ಎರಡು ಉದಾಹರಣೆ ಕೊಡಿ.

37. ಕಂದಾಯ ನ್ಯಾಯಾಲಯಗಳ ಶ್ರೇಣಿಯನ್ನು ಬರೆಯಿರಿ.

38. ಜಿಲ್ಲಾ ಪಂಚಾಯಿತಿಯ ಸ್ಥಾಯಿ ಸಮಿತಿಗಳನ್ನು ಹೆಸರಿಸಿ.

39. ಲೋಕಸೇವಾ ಆಯೋಗದ ವಿಧಗಳನ್ನು ತಿಳಿಸಿ.

40. ಜಂಟಿ ಲೋಕಸೇವಾ ಆಯೋಗ ಕುರಿತು ಲಘು ಟಿಪ್ಪಣಿ ಬರೆಯಿರಿ.

**V. ಈ ಕೆಳಗಿನ ಪ್ರಶ್ನೆಗಳಿಗೆ ಮೂರರಿಂದ ಆರು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ :**

**6 × 3 = 18**

41. ಭಾರತದ ಸಂವಿಧಾನದ ಪ್ರಧಾನ ಲಕ್ಷಣಗಳನ್ನು ವಿವರಿಸಿ.

42. ಭಾರತ ಸಂವಿಧಾನದ ಪ್ರಸ್ತಾವನೆಯ ಮುಖ್ಯಾಂಶಗಳನ್ನು ಪಟ್ಟಿ ಮಾಡಿ.

43. ಮೂಲಭೂತ ಕರ್ತವ್ಯಗಳನ್ನು ಬರೆಯಿರಿ.

44. ಉಚ್ಚ ನ್ಯಾಯಾಲಯವು ಅಧೀನ ನ್ಯಾಯಾಲಯಗಳ ಮೇಲೆ ಹೇಗೆ ನಿಯಂತ್ರಣ ಹೊಂದಿರುತ್ತದೆ ?

45. ನಗರ ಸ್ಥಳೀಯ ಸಂಸ್ಥೆಗಳನ್ನು ವರ್ಗೀಕರಿಸಿ ಬರೆಯಿರಿ.

46. ರಾಜ್ಯಲೋಕಸೇವಾ ಆಯೋಗಗಳ ಕಾರ್ಯಗಳನ್ನು ವಿವರಿಸಿ.

**VI. ಈ ಪ್ರಶ್ನೆಗೆ ಎಂಟು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ :** **1 × 4 = 4**

47. ಗ್ರಾಮಪಂಚಾಯಿತಿಯ ಕಾರ್ಯಗಳನ್ನು ವಿವರಿಸಿ.

DO NOT WRITE ANYTHING HERE